# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 13/05/2022 ರಂದು ಬೆಳಿಗ್ಗೆ 11-00 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:49 ಲಿಂಗರಾಜಪುರಕ್ಕೆ ಸಂಬಂಧಿಸಿದ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

| ಹಾಜರಾಗಿದ್ದ ಅಧಿಕಾರಿಗಳು | ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು |
|---|---|
| 1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ) ನೋಡಲ್ ಅಧಿಕಾರಿ – ಅಧ್ಯಕ್ಷರು<br>2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಕಾರ್ಯದರ್ಶಿ<br>3. ಶ್ರೀ.ವಿಜಯರಾಜ್ ಎಸ್, ವಾರ್ಡ್ ನಂ.49, ಕಿರಿಯ ಆರೋಗ್ಯ ಪರಿವೀಕ್ಷಕರು<br>4. ಶ್ರೀ ಕೃಷ್ಣಮೂರ್ತಿ, ಕಂದಾಯ ಪರಿವೀಕ್ಷಕರು<br>5. ಪೂಜಾ ಎಂ ಸಹಾಯಕ ಅಭಿಯಂತರರು<br>6. ಮೊಹಮದ್ ರಹಮತುಲ್ಲಾ, ಕೆಲಸ ಪರಿವೀಕ್ಷಕರು<br>7. ಎಂ ರಾಮಲಕ್ಶ್ಮೀ, ಕಲ್ಯಾಣ ಶಾಖೆ<br>8. ಶ್ರೀ.ಪ್ರಸನ್ನಕುಮಾರ್, ಸ್ಟ್ರೀಟ್‌ಲೈಟ್ ಮೇಂಟೆನೆಸ್ | 1. ಶ್ರೀ ಪಿ.ಜಯಶೀಲನ್, ಕೆ.ಎಸ್.ಎಫ್.ಸಿ<br>2. ವೀರಪಿಂಟೋ<br>3. ಶ್ರೀ.ಕಿರೀಟಪ್ಪ |

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ.49 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡಂತೆ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಕೆ.ಎಸ್.ಎಫ್.ಸಿ ಲೇಔಟ್‌ನಲ್ಲಿ ದೇವಸ್ಥಾನ /ಶಾಲೆಯ ಬಳಿಯ ಅಂಗಡಿಗಳಲ್ಲಿ ಕಾಫೀ, ಟೀ, ಸಿಗರೇಟ್ ಹಾಗೂ ಗಾಂಜಾ ಸೇವನೆ ನಡೆಯತ್ತಿರುವ ಬಗ್ಗೆ ಕ್ರಮಕೈಗೊಳ್ಳಲು ಹಿಂದಿನ ಸಭೆಯಲ್ಲಿ ಸೂಚಿಸಿರುವ ಮೇರೆಗೆ ಬಿಬಿಎಂಪಿ ವತಿಯಿಂದ ಕಾಫಿ, ಟೀ, ಸಿಗರೇಟ್ ಅಂಗಡಿಗಳಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ, ದಂಡ ವಿಧಿಸಲಾಗಿರುತ್ತದೆ, ಸಿಗರೇಟ್ ಕೇಸ್ ಹಾಕಲಾಗಿರುತ್ತದೆ ಹಾಗೂ ಅಂಗಡಿ ಮಾಲೀಕರಿಗೆ ವಾರ್ನಿಂಗ್ ಮಾಡಲಾಗಿದ್ದರೂ ಸಹ ಸಮಸ್ಯೆ ಇತ್ಯರ್ಥವಾಗಿರುವುದಿಲ್ಲ, ಸದರಿ ಏರಿಯಾಗಳಲ್ಲಿ ರೌಡಿಗಳ ಅಟ್ಟಹಾಸ ನಿಯಂತ್ರಣಕ್ಕೆ ಬರುತ್ತಿಲ್ಲವೆಂದು ಸಮಿತಿ ಸದಸ್ಯರು ತಿಳಿಸಿದರು. ಈ ಸಂಬಂಧ ಪೋಲೀಸ್ ಇಲಾಖೆಗೆ ಪತ್ರ ಬರೆಯಲು ಆರೋಗ್ಯವೈದ್ಯಾಧಿಕಾರಿಗಳಿಗೆ ನೋಡಲ್ ಅಧಿಕಾರಿ ರವರು ಸೂಚಿಸಿದರು. ಬಿಬಿಎಂಪಿ ಆರೋಗ್ಯ ಇಲಾಖೆಯವರು ಈ ಸಂಬಂಧ ಕ್ರಮ ಕೈಗೊಳ್ಳಬೇಕೆಂದು ಪೋಲೀಸ್ ಇಲಾಖೆಯವರು ತಿಳಿಸಿರುತ್ತಾರೆ. ಬಿಬಿಎಂಪಿ ಆರೋಗ್ಯ ಇಲಾಖೆಯವರು ಅಂತಹ ಅಂಗಡಿಗಳ ಲೈಸನ್ಸ್ ರದ್ದುಪಡಿಸುವ ಸಂಬಂಧ ಅಂಗಡಿ ಮಾಲೀಕರಿಗೆ ನೋಟೀಸ್ ನೀಡಬೇಕು ಎಂದು ತಿಳಿಸಿರುತ್ತಾರೆ.

ಪಾಟ್‌ಹೋಲ್ಸ್‌ಗಳ ಬದಿಯಲ್ಲಿರುವ ಶಿಲ್ಟ್‌ಗಳನ್ನು ತೆಗೆದಿರುವುದಿಲ್ಲ ಶಿಲ್ಟ್‌ಗಳನ್ನು ತೆಗೆಯಲು ಸಹಾಯಕ ಅಭಿಯಂತರರು ಕ್ರಮ ಕೈಗೊಳ್ಳುವುದು ಹಾಗೂ ಅನುಮತಿ ಇಲ್ಲದೇ ಬೇಕಾಬಿಟ್ಟಿ ರಸ್ತೆ ಅಗೆಯುವುದನ್ನು ತಡೆಯಲು ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ಸೂಚಿಸಲಾಯಿತು.

**ಮು.ತಿ.ನೋ,**

CamScanner

ಪೌರಕಾರ್ಮಿಕರು ಹಾಗೂ ಕಸ, ಸ್ವಚ್ಚತೆಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿಲ್ಲ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ ಎಂಬುದಾಗಿ ಸಭೆಗೆ ಸದಸ್ಯರು ತಿಳಿಸಿದರು.

ಬೀದಿ ದೀಪಗಳ ನಿರ್ವಹಣೆ ಉತ್ತಮವಾಗಿದ್ದು, ಕೆಲವು ಸಿಮೆಂಟ್ ಕಂಬಗಳು ಹಳೆಯದಾಗಿದ್ದು, ಕಂಬಗಳ ಬದಲಿಸಲು ಬೆಸ್ಕಾಂ ರವರಿಗೆ ಪತ್ರ ಬರೆಯಲು ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ಸೂಚಿಸಿದರು.

ಸೊಳ್ಳೆಗಳ ಹಾವಳಿ ಹೆಚ್ಚಾಗಿದ್ದು, ಸೊಳ್ಳೆ ನಿಯಂತ್ರಣಕ್ಕೆ ಔಷಧಿಗಳನ್ನು ಸಿಂಪಡಿಸಿ ಹಾಗೂ ಫಾಗಿಂಗ್ ಮಾಡಲಾಗುತ್ತಿರುವುದಾಗಿ ಇನ್ನು ಹೆಚ್ಚಿನ ಕಡೆ ಔಷಧಿಗಳನ್ನು ಸಿಂಪಡಿಸಲು ಹಾಗೂ ಫಾಗಿಂಗ್ ಮಾಡಲು ಹಿರಿಯ ಆರೋಗ್ಯ ನಿರೀಕ್ಷಕರಿಗೆ ಸೂಚಿಸಲಾಯಿತು.

ಮಳೆ ಅವಾಂತರ ಬಗ್ಗೆ ಯಾವುದೂ ದೂರು ಇರುವುದಿಲ್ಲ.

ಕೋವಿಡ್–19 ಯಾವುದೇ ಪ್ರಕರಣ ವರದಿಯಾಗಿಲ್ಲ, ಟೆಸ್ಟಿಂಗ್ ಆಗುತ್ತಿದೆ, ಬೂಸ್ಟರ್ ಡೋಸ್ ಅನ್ನು 60 ವರ್ಷಕ್ಕೂ ಮೇಲ್ಪಟ್ಟವರಿಗೆ ವ್ಯಾಕ್ಸಿನೇಷನ್ ಮಾಡಲಾಗುತ್ತಿದೆ. ಹಾಗೂ 60 ವರ್ಷಕ್ಕೂ ಕೆಳಗಿನವರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಬೂಸ್ಟರ್‌ಡೋಸ್ ಹಾಕಿಸಿಕೊಳ್ಳಲು ಅರಿವು ಮೂಡಿಸಲಾಗುತ್ತಿದೆ. 12–14 ವರ್ಷದವರಿಗೆ 1ನೇ ಮತ್ತು 2ನೇ ಡೋಸ್ ಅನ್ನು ಉಚಿತವಾಗಿ ಹಾಕಲಾಗುತ್ತಿದೆ. ಶಾಲಾ ಕಾಲೇಜುಗಳು, ಕೊಳಚೇ ಪ್ರದೇಶಗಳು, ಕಂಪನಿಗಳ ಬಳಿ 14–18 ವರ್ಷ ವಯಸ್ಸಿನವರಿಗೆ ಕೊಡಲಾಗುತ್ತಿದೆ. 5 ವರ್ಷದ ಒಳಗಿನ ಮಕ್ಕಳಿಗೆ ಟಮೋಟೊ ಜ್ವರ ಬರುವ ಸಾಧ್ಯತೆ ಇದೆ ಎಂಬುದಾಗಿ ವೈದ್ಯಾಧಿಕಾರಿಗಳು ತಿಳಿಸಿದರು.

ಚುನಾವಣೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶ ಇನ್ನೂ 2–3 ದಿನಗಳಲ್ಲಿ ತೀರ್ಮಾನವಾಗುತ್ತದೆ ಹಾಗೂ ಮತದಾರರ ಪಟ್ಟಿಗೆ ಹೆಸರನ್ನು ಸೇರಿಸಲು ಕಾಲಾವಕಾಶವಿದೆ ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸಬೇಕು ಎಂಬುದಾಗಿ ನೋಡಲ್ ಅಧಿಕಾರಿಗಳು ತಿಳಿಸಿದರು.

ಸದರಿ ವಾರ್ಡ್‌ನ ಡಾಂಬರೀಕರಣ ಪ್ರಾರಂಭವಾಗಿದ್ದು, 17 ರಸ್ತೆಗಳು ಪೂರ್ಣಗೊಂಡಿದ್ದು, 56 ರಸ್ತೆಗಳ ಡಾಂಬರೀಕರಣ ಪ್ರಗತಿಯಲ್ಲಿದೆ ಎಂಬುದಾಗಿ ವಾರ್ಡ್‌ನ ಸಹಾಯಕ ಇಂಜಿನಿಯರ್ ಮಾಹಿತಿ ನೀಡಿದರು.

ಕೃಷ್ಣಪ್ಪ ಬಡಾವಣೆಯಲ್ಲಿ ನಿವೇಶನಗಳು ಖಾಲಿ ಇದ್ದು, ಕಸ ಹಾಗೂ ಕೊಳತೆ ವಸ್ತುಗಳನ್ನು ಸತ್ತ ಪ್ರಾಣಿಗಳನ್ನು ಹಾಕುತ್ತಾರೆ ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಸಮಿತಿ ಸದಸ್ಯರು ತಿಳಿಸಿದರು.

ಎಲೆಕ್ಟ್ರಾನಿಕ್ ಬೀಟ್ ಸಿಸ್ಟಂ ಅನ್ನು ಮರುಪರಿಚಯಿಸಲು ಪೋಲೀಸ್ ಇಲಾಖೆಗೆ ತಿಳಿಸಲು ಸೂಚಿಸಲಾಯಿತು.

ಮು.ತಿ.ನೋ.,

CS CamScanner

ಸರಗಳ್ಳತನಗಳು ಹೆಚ್ಚಾಗಿದ್ದು, ಈ ಬಗ್ಗೆ ಪೊಲೀಸ್ ಇಲಾಖೆ ಕ್ರಮ ವಹಿಸಬೇಕು ಎಂಬುದಾಗಿ ಸಮಿತಿ ಸದಸ್ಯರು ತಿಳಿಸಿದರು. ಈ ಬಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್ ರವರಿಗೆ ಪತ್ರ ಬರೆಯಲು ತಿಳಿಸಿದರು.

ಸಭೆಯು 12–00 ಗಂಟೆಗೆ ನೋಡಲ್ ಅಧಿಕಾರಿಗಳ ಹಾಗೂ ಸಮಿತಿ ಸದಸ್ಯರ ಒಮ್ಮತದ ತೀರ್ಮಾನದಂತೆ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

13-05-22
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ–49 ಲಿಂಗರಾಜಪುರ

-sd-
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–49 ಲಿಂಗರಾಜಪುರ

ಪ್ರತಿಯನ್ನು,

1. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
3. ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಪೊಲೀಸ್ ಠಾಣೆ ಬಾಣಸವಾಡಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುತಿ ಸೇವಾನಗರ ರವರ ಮಾಹಿತಿಗಾಗಿ ರವಾನಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುತಿಸೇವಾನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರ ಅವಗಾಹನೆಗೆ ರವಾನಿಸಿದೆ.
8. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
9. ಕಛೇರಿ ಕಡತಕ್ಕೆ.

CamScanner